ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಸೋಮವಾರ, ದಿನಾಂಕ ೬ನೇ ಅಕ್ಟೋಬರ್ ೧೯೮೮ ಆಶ್ವಯುಜ ೧೪, ೧೯೧೦ ಶಕ

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೧೧ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ರವರು ಪೀಠವನ್ನು ಅಲಂಕರಿಸಿದರು]

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಬೈಂದೂರಿನಲ್ಲಿ ವಿದ್ಯುತ್ ಸಬ್ ಸ್ಟೇಷನ್ ಮತ್ತು ಕೆ.ಇ.ಬಿ. ಸಬ್ ಡಿವಿಜನ್ ಸ್ಥಾಪನೆ

೨೫೫೦. ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳು ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರಿನಲ್ಲಿ ಸ್ಥಾಪಿಸಲಾಗುವುದೆಂದು ಎರಡು ವರ್ಷಗಳಿಂದ ಆಶ್ವಾಸನೆ ನೀಡುತ್ತಿದ್ದರೂ ವಿದ್ಯುತ್ ಸ್ಟೇಷನ್ ಇನ್ನೂ ಕಾರ್ಯಾರಂಭವಾಗದಿರಲು ಕಾರಣವೇನು ?

ಆ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಸಬ್ ಡಿವಿಜನನ್ನು ಕೂಡ ಬೈಂದೂರಿನಲ್ಲಿ ತೆರೆಯುವ ಅವಶ್ಯಕತೆಯ ಕುರಿತು ಸರ್ಕಾರ ಯಾವ ನಿರ್ಧಾರಕ್ಕೆ ಬಂದಿದೆ ?

ಇ) ಈ ಎರಡೂ ಸಬ್-ಡಿವಿಜನ್‌ಗಳ ಸವಲತ್ತಿಲ್ಲದ ಕಾರಣ ಬೈಂದೂರು ಭಾಗದ ಜನರಿಗೆ ಅತೀವ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಈ ಸವಲತ್ತುಗಳನ್ನು ಯಾವಾಗ ನೀಡಲಾಗುವುದು.

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುತ್ ಮಂತ್ರಿಗಳು).—

ಅ) ಬೈಂದೂರಿನಲ್ಲಿ ಒಂದು ಸಬ್ ಸ್ಟೇಷನ್ ಸ್ಥಾಪಿಸಲು ಈಗಾಗಲೇ ನಿವೇಶನವನ್ನು ಆಯ್ಕೆ ಮಾಡಲಾಗಿದೆ. ಮತ್ತು ಅದನ್ನು ವಶಕ್ಕೆ ಪಡೆಯಲು ಜಿಲ್ಲಾಧಿಕಾರಿಗಳೊಡನೆ ವ್ಯವಹರಿಸಲಾಗಿದೆ. ಈ ಕಾರ್ಯವನ್ನು ಈ ಸಾಲಿನಲ್ಲಿ ಕೈಗೊಳ್ಳಲು ಆಯವ್ಯಯದಲ್ಲಿ ಹಣವನ್ನು ಒದಗಿಸಲಾಗಿದೆ.

ಆ) ಮಂಡಳಿಯ ಸಧ್ಯದ ಆರ್ಥಿಕ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಕನಿಷ್ಟ ಅಗತ್ಯಗಳನ್ನು ಪೂರೈಸುವಷ್ಟು ವಿಭಾಗ ಉಪವಿಭಾಗಗಳ ಪುನರ್ ರಚನೆಯನ್ನು ಕೈಗೊಳ್ಳಲಾಗಿದೆ. ಉಡುಪಿ ವಿಭಾಗ ಪುನರ್ ರಚನೆ ಪರಿಶೀಲನೆ ಸಮಯದಲ್ಲಿ ಈ ವಿಷಯ ಪರಿಶೀಲಿಸಿ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು.

ಇ) ಹಾಲಿ ಬೈಂದೂರು ಕುಂದಾಪುರ ಉಡುಪಿ ವಿಭಾಗಕ್ಕೆ ಸೇರಿದೆ 'ಅ' ನ ಉತ್ತರದಲ್ಲಿ ತಿಳಿಸಿರುವಂತೆ ಬೈಂದೂರಿನಲ್ಲಿ ಉಪ ವಿಭಾಗ ಸ್ಥಾಪಿಸುವ ವಿಷಯ ಉಡುಪಿ ವಿಭಾಗದ ಪುನರ್‌ರಚನೆ ಸಮಯದಲ್ಲಿ ಪರಿಶೀಲಿಸಿ ಸೂಕ್ತ ತೀರ್ಮಾನ ಕೈಗೊಳ್ಳಲಾಗುತ್ತದೆ.

ಈ) 'ಅ' ಮತ್ತು 'ಆ' ಉತ್ತರಗಳನ್ನು ನೋಡಿ.

ಶ್ರೀ ಜಿ. ಎಸ್. ಆಚಾರ್.—ಈಗಿರತಕ್ಕ ಸಬ್ ಸ್ಟೇಷನ್ ಮಂಗಳೂರು ಮತ್ತು ಕುಂದಾಪುರ ಇವುಗಳ ಮಧ್ಯೆ ಇದ್ದು ಇಲ್ಲಿರತಕ್ಕ ಲೈಟುಗಳು ಬಹಳ ಡಿಂ ಆಗಿರುವುದರಿಂದ ಬೈಂದೂರಿನಲ್ಲಿ ಒಂದು ಸಬ್ ಸ್ಟೇಷನ್ ಆಗಬೇಕೆಂದು ಈಗ್ಗೆ ೨ ವರ್ಷಗಳ ಹಿಂದೆಯೇ ಹೇಳಿದ್ದೆವು ಅಂದಿನ ಮಾನ್ಯ ವಿದ್ಯುತ್ ಮಂತ್ರಿಗಳು ೮೭ರ ಮಾರ್ಚಿಯೊಳಗೆ ಮಾಡಿಕೊಡುತ್ತೇವೆಂದು ಹೇಳಿದ್ದರು ನಂತರ ೮೮ರ ಮಾರ್ಚಿಯೊಳಗೆ ಸ್ಥಾಪಿಸುತ್ತೇವೆಂದು ಹೇಳಿದರು, ಆದರೂ ಆಗಲಿಲ್ಲ ಈಗ ೮೯ರ ಮಾರ್ಚಿಯೊಳಗಾದರೂ ಅಲ್ಲಿ ಸ್ಥಾಪನೆ ಮಾಡಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಇನ್ನು ಎರಡನೆಯದಾಗಿ, ಬೈಂದೂರಿನಲ್ಲಿ ಉಪ ವಿಭಾಗವನ್ನು ಸ್ಥಾಪಿಸಿರುವ ವಿಷಯ ಉಡುಪಿ ವಿಭಾಗದ ಪುನರ್ರಚನೆ ಸಮಯದಲ್ಲಿ ಪರಿಶೀಲಿಸುವುದಾಗಿ ಹೇಳಿದ್ದೀರಿ. ಈ ಪುನರ್‌ರಚನೆ ಸಮಯವನ್ನು ಪುನರ್ ಪರಿಶೀಲಿಸುವುದಾದರೂ ಯಾವಾಗ ಎಂಬುದನ್ನು ಹೇಳುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.—ಸಬ್ ಸ್ಟೇಷನ್ ಬಗ್ಗೆ ಈಗಾಗಲೇ ನಾವು ಕ್ರಮವನ್ನು ತೆಗೆದುಕೊಂಡಿದ್ದೇವೆ. ಅದಕ್ಕೆ ಬೇಕಾದ ಜಾಗವನ್ನೂ ತೆಗೆದುಕೊಂಡಿದ್ದೇವೆ. ಇನ್ನು ಕೆಲವಾರು ತಿಂಗಳುಗಳಲ್ಲಿ ಸಬ್ ಸ್ಟೇಷನ್ ತೆರೆಯುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತದೆ,

ಇನ್ನು ಸಬ್ ಡಿವಿಜನನ್ನು ತೆರೆಯುವ ವಿಚಾರದಲ್ಲಿ ನಾನು ಕ್ಷಣ ಅಭಿವ್ಯಾಯವನ್ನು ಹೇಳುವುದು ಕ್ಯಾಗುವುದಿಲ್ಲ. ಏಕೆಂದರೆ ಯಾವುದೇ ಒಂದು ಸ್ಥಳದಲ್ಲಿ ಒಂದು ಸಬ್ ಡಿವಿಜನ್ ಎಂದು ತೆರೆಯಬೇಕಾದರೆ ಅದಕ್ಕೆ ಸಂಬಂಧಪಟ್ಟಂತೆ ಇಡೀ ಡಿವಿಜನ್‌ನ್ನು ರಿವೈಸ್ ಮಾಡಬೇಕಾಗುತ್ತದೆ. ಆದ್ದರಿಂದ ಮಾನ್ಯ ಸದಸ್ಯರು ಕೇಳಿರತಕ್ಕ ಸ್ಥಳದಲ್ಲಿ ಸಬ್ ಡಿವಿಜನ್‌ನ್ನು ಸ್ಥಾಪನೆ ಮಾಡಬೇಕಾದರೆ ಅದು ಬೋರ್ಡ್‌ನಲ್ಲಿ ತೀರ್ಮಾನವಾಗಬೇಕು, ಇದಕ್ಕೆ ಸಾಕಷ್ಟು ಹಣವೂ ಕೂಡ ಬೇಕಾಗುತ್ತದೆ. ಆದುದರಿಂದ ಮಾನ್ಯ ಸದಸ್ಯರಿಗೆ ಇಷ್ಟು ಮಾತ್ರ ಹೇಳುತ್ತೇನೆ ಆದಷ್ಟು ಜಾಗ್ರತೆ ಎಂದರೆ ಡೇಟ್ ಮತ್ತು ತಿಂಗಳು ಯಾವಾಗ ಎಂದು ಹೇಳುವುದಕ್ಕಾಗುವುದಿಲ್ಲ ಅಲ್ಲಿಗೆ ಭೇಟಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮತ್ತೆ ಓಲ್ಟೇಜ್ ಪ್ರಾಬ್ಲಮ್ ಬಗ್ಗೆ ಏನು ಹೇಳಿರುತ್ತಾರೆ ಅದೂ ಕೂಡ ಸರ್ಕಾರದ ಗಮನಕ್ಕೆ ಬಂದಿದೆ.

ಕರ್ನಾಟಕದಲ್ಲಿ ಕೈಗಾರಿಕಾ ಕ್ಷೇತ್ರಗಳು

೨೯೪. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಇದುವರೆಗೆ ಎಷ್ಟು ತಾಲ್ಲೂಕುಗಳಲ್ಲಿ ಕೈಗಾರಿಕಾ ವಸಾಹತು ಸ್ಥಾಪಿಸಲಾಗಿದೆ (ಜಿಲ್ಲೆಗಳೊಂದಿಗೆ ವಿವರಣೆಗಳನ್ನು ಒದಗಿಸಬೇಕು)

ಆ) ೧೯೮೮-೮೯ರಲ್ಲಿ ಎಷ್ಟು ತಾಲ್ಲೂಕುಗಳಲ್ಲಿ ಕೈಗಾರಿಕಾ ಶೆಡ್ಡುಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ (ಜಿಲ್ಲೆಗಳೊಂದಿಗೆ ವಿವರಗಳನ್ನು ಒದಗಿಸಬೇಕು)

ಇ) ಕೋಲಾರ ಜಿಲ್ಲೆಯಲ್ಲಿ ನಿರ್ಮಿಸಿದ ಕೈಗಾರಿಕಾ ಶೆಡ್ಡುಗಳು ಹಾಗೂ ನಿರ್ಮಿಸಲು ಉದ್ದೇಶಿಸಲಾದ ಶೆಡ್ಡುಗಳು (ತಾಲ್ಲೂಕುಗಳೊಂದಿಗೆ ವಿವರಗಳನ್ನು ಒದಗಿಸಬೇಕು)

ಈ) ಮುಳಬಾಗಲು ತಾಲ್ಲೂಕಿನಲ್ಲಿ ಕೈಗಾರಿಕಾ ವಸಾಹತು ಸ್ಥಾಪಿಸಲು ಯಾವುದೇ ರೀತಿಯ ಜಮೀನನ್ನು ಪಡೆದುಕೊಂಡಿಲ್ಲವೆಂಬುದು ನಿಜವೇ ? ನಿಜವಾಗಿದ್ದರೆ ಕಾರಣಗಳನ್ನು ಕೊಡಿ ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು).—

ಅ) ೬೫ ತಾಲ್ಲೂಕು (ಜಿಲ್ಲೆಗಳ ವಿವರಗಳನ್ನು ಲಗತ್ತಿಸಲಾಗಿದೆ).

ಆ) ೭ ತಾಲ್ಲೂಕುಗಳಲ್ಲಿ (ಹೆಚ್ಚುವರಿ ಕೈಗಾರಿಕಾ ಶೆಡ್ಡುಗಳನ್ನು ಹಾಲಿ ಇರುವ ಕೈಗಾರಿಕಾ ವಸಾಹತುವಿನಲ್ಲಿ ನಿರ್ಮಿಸಲು ಯೋಜನೆ ಹಾಕಿಕೊಳ್ಳಲಾಗಿದೆ).